ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,

ಸಿ.ಸಿ. ನಂ.: 268/2016

.....................................................................

CW 14
PW 13

ಹೆಸರು : ಎಸ್ ಜಿ ವಾರಕರ್

ತಂದೆಯ ಹೆಸರು : ಗುರುನಾಥ

ವಯಸ್ಸು : 69 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ

ವಾಸಸ್ಥಳ : ಕಾರವಾರ.

ದಿನಾಂಕ 13-08-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 16-07-2013 ರಂದು ಚಾಸಾ 1 ರವರು ದೂರನ್ನು ಠಾಣೆಗೆ ನೀಡಿದ್ದು, ಅದನ್ನು ನಾನು ಸ್ವೀಕರಿಸಿ ಗುನ್ನಾ ನಂಬರ 171/2013 ರಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವ. ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ದೂರು ಇದೇ ಇದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಪ್ರ.ವ.ವ ಇದೇ ಇದ್ದು ಅದನ್ನು ಈಗಾಗೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು.

ದಿನಾಂಕ 23-07-2013 ರಂದು ಜಪ್ತುಪಂಚನಾಮೆಯನ್ನು ಚಾಸಾ 15 ರವರು ಚಾಸಾ 4 ಮತ್ತು 5 ರವರ ಸಮಕ್ಷಮ ಜರುಗಿಸಿದ್ದರು. ಆ ಸಮಯದಲ್ಲಿ ನಾನು ಒಂದು ಟಿಪ್ಪಣಿ ನೋಟ್ ಬುಕ್ (ಅದರ ಮುಖ ಪುಟ ಕೆಂಪು ಕೇಸರಿ ಬಣ್ಣದ ರಟ್ಟಿನ ಡಿಸೈನ್ ಆಗಿದ್ದು ಹಿಂದಿನ ಕವರ್ ರಟ್ಟಿನ ಕವರ್ ಆಗಿರುತ್ತದೆ ಹಾಗೂ ಅದು 1 ರಿಂದ 294 ಪುಟ ಸಂಖ್ಯೆ ಇರುತ್ತದೆ, ಪ್ರತಿ ಪುಟದಲ್ಲಿ ಹಳಿಯಾಳ ಪಿ ಎಸ್, ಯು.ಕೆ. ಎಂಬ ಸೀಲ್ ಹಾಕಿರುತ್ತದೆ.) ಅನ್ನು ಚಾಸಾ 15 ರವರಿಗೆ ನೀಡಿರುತ್ತೇನೆ. ಸದರಿ ನೋಟ್ ಬುಕ್ ನ ಪುಟ 1 ರಿಂದ 67 ಪುಟಗಳ ವರೆಗೆ ಕನ್ನಡ ಭಾಷೆಯಲ್ಲಿ ಬರೆದಿದ್ದು, 67 ನೇ ಪುಟದಲ್ಲಿ ದಿನಾಂಕ 14-05-2013 ರಂದು 22-00

ಗಂಟೆಯ ವರೆಗೆ ಬರೆದಿದ್ದು, ಸದರಿ ಪುಸ್ತಕದಲ್ಲಿ ಆರೋಪಿಯು ತನ್ನ ದಿನ ನಿತ್ಯದ ಕರ್ತವ್ಯದ ಬಗ್ಗೆ ಟಿಪ್ಪಣಿ ಬರೆದಿರುತ್ತಾರೆ. ಸದರಿ ನೋಟ್ ಬುಕ್ ನ ಪುಟ 289, 290 ಮತ್ತು 291 ರಲ್ಲಿ ಇಂಗ್ಲೀಷ ಭಾಷೆಯಲ್ಲಿ ಬರೆಯಲಾಗಿರುತ್ತದೆ. ಸದರಿ ಪಂಚನಾಮೆಯನ್ನು ರಾತ್ರಿ 08-00 ರಿಂದ 09-00 ಗಂಟೆಯ ವರೆಗೆ ಬರೆದು ಮುಗಿಸಲಾಯಿತು.

ಸದರಿ ಜಪ್ತುಪಂಚನಾಮೆ ನಿಪಿ 11 ರಂತೆ ಇರುತ್ತದೆ. ನಾನು ಚಾಸಾ 15 ರವರ ಮುಂದೆ ಹಾಜರುಪಡಿಸಿದ ನೋಟ್ ಬುಕ್ ಈಗ ನ್ಯಾಯಾಲಯದ ಮುಂದೆ ಇರುತ್ತದೆ ಎಂದು ಸಾಕ್ಷಿಯು ನಿಪಿ 4 ಅನ್ನು ತೋರಿಸುತ್ತಾರೆ.

ದಿನಾಂಕ 17-07-2013 ರಂದು ಡಿ ಎಸ್ ಪಿ ಸಾಹೇಬರು ದಾಂಡೇಲಿ ರವರಿಗೆ ಆರೋಪಿಯ ಮೇಲೆ ಪ್ರಕರಣ ದಾಖಲಿಸಲು ಹಾಗೂ ಶಿಸ್ತು ಕ್ರಮ ಕೈಗೊಳ್ಳಲು ಪತ್ರ ಬರೆದಿರುತ್ತೇನೆ.

ದಿನಾಂಕ 18-07-2013 ರಂದು ಡಿ ಎಸ್ ಪಿ ಸಾಹೇಬರು ದಾಂಡೇಲಿ ರವರಿಂದ ಬಂದ ಆದೇಶ ಪತ್ರದ ಪ್ರಕಾರ ಕಡತವನ್ನು ಮುಂದಿನ ತನಿಖೆಗೆ ಚಾಸಾ 15 ರವರಿಗೆ ನೀಡಬೇಕೆಂದು ಆದೇಶ ಮಾಡಿದ್ದರಿಂದ ಕಡತವನ್ನು ಚಾಸಾ 15 ರವರಿಗೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ನಿಪಿ 11 ಅನ್ನು ಜರುಗಿಸುವ ಸಮಯದಲ್ಲಿ ಚಾಸಾ 15 ರವರಿಗೆ ನಾನು ನೀಡಿರುವ ನೋಟ್ ಬುಕ್ ಈಗ ನನಗೆ ತೋರಿಸುತ್ತಿರುವ ನೋಟ್ ಬುಕ್ ಆಗಿರುತ್ತದೆ ಎಂದರೆ ಸರಿ. ಸದರಿ ನೋಟ್ ಬುಕ್ ಅನ್ನು ಈಗ ನಿಪಿ 23 ಎಂದು ಗುರುತಿಸಲಾಯಿತು. ನಿಪಿ 11 ಅನ್ನು ಮಧ್ಯಾಹ್ನ 02-00 ರಿಂದ 03-00 ಗಂಟೆಯ ವರೆಗೆ ಜರುಗಿಸಲಾಗಿದೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 1, 15 ಮತ್ತು 16 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ನಿಪಿ 2 ರ ಪ್ರಕಾರ ಈ ಪ್ರಕರಣದ ಘಟನೆಯು ದಿನಾಂಕ 30-03-2012 ರಿಂದ 16-05-2013 ರ

ವರೆಗೆ ನಡೆದಿರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಚಾಸಾ 1 ರವರು ದೂರನ್ನು ದಿನಾಂಕ 16-07-2013 ರಂದು ಸಲ್ಲಿಸಿರುತ್ತಾರೆ. ಅವರು ನನ್ನ ಸಮಕ್ಷಮ ಯಾವುದೇ ಲಿಖಿತ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಜಾಗಕ್ಕೆ ಹೋಗಿಲ್ಲ, ಚಾಸಾ 5 ಮತ್ತು 6 ರವರ ಸಮಕ್ಷಮ ಹಾಗೂ ನನ್ನ ಸಮಕ್ಷಮ ಚಾಸಾ 15 ರವರು ಯಾವುದೇ ಜಪ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 1, 2 ಮತ್ತು 11 ಅನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ನಿಪಿ 11 ಅನ್ನು ಚಾಸಾ 15 ರವರು ಬರೆದಿರುತ್ತಾರೆ. ನಿಪಿ 11 ಅನ್ನು ಚಾಸಾ 15 ರವರಿಗೆ ನೀಡುವ ಸಮಯದಲ್ಲಿ ಅದರಲ್ಲಿ ಎಷ್ಟು ಹಾಳೆಗಳು ಖಾಲಿ ಇದ್ದವು ಎನ್ನುವುದು ಗೊತ್ತಿಲ್ಲ. ಚಾಸಾ 15 ರವರು ನಿಪಿ 11 ರಂತೆ ಯಾವುದೇ ಜಪ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 23 ರ ಮೇಲೆ ಪಿರ್ಯಾದಿ, ನನ್ನದಾಗಲಿ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿಲ್ಲ. ಚಾಸಾ 15 ರವರ ಸಮಕ್ಷಮ ನಾನು ನೋಟ್ ಬುಕ್ ಮತ್ತು ನಗದು ಪುಸ್ತಕವನ್ನು ಹಾಜರುಪಡಿಸಿರುತ್ತೇನೆ. ನಾನು ಡಿ ವಾಯ್ ಎಸ್ ಪಿ ದಾಂಡೇಲಿ ರವರಿಗೆ ಯಾವುದೇ ಪತ್ರ ಬರೆದಿಲ್ಲ, ಅವರು ಯಾವುದೇ ಆದೇಶ ಪತ್ರ ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ, ಪ್ರಕರಣಕ್ಕೆ ಅನುಕೂಲ ಆಗುವಂತೆ ದಾಖಲೆಗಳನ್ನು ನಾವೇ ರಚಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 , 14 ಮತ್ತು 15 ರವರು ನನ್ನ ಮೇಲಾಧಿಕಾರಿಗಳು ಆಗಿರುವುದರಿಂದ ಅವರ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಹಳಿಯಾಳ